
# ಶ್ರೀಮಾತೆಯವರ ಕೊನೆಯ ಮಾತು!

**ಡಿ.ಕೆ. ಈರೇಗೌಡ**

**ಶ್ರೀಮಾತೆಯವರು ತಮ್ಮ ಬದುಕಿನುದ್ದಕ್ಕೂ ತಪಸ್ಸಿನಂತೆ ಆಚರಿಸಿದ್ದನ್ನೇ ತಮ್ಮ ಜೀವನದ ಕೊನೆಯಲ್ಲೂ ಎಲ್ಲರ ಕಲ್ಯಾಣಕ್ಕಾಗಿ ಉಸುರಿದರು. ಆ ಸಂದೇಶದ ಮರ್ಮವನ್ನು ತಿಳಿಸಲೆತ್ನಿಸಿರುವ ಡಿ.ಕೆ.ಈರೇಗೌಡರು ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗದ ನಿವೃತ್ತ ಉಪನಿರ್ದೇಶಕರು ಹಾಗೂ ಮೈಸೂರು ರಾಮಕೃಷ್ಣ ಆಶ್ರಮದ ಭಕ್ತರು.**

ಶ್ರೀರಾಮಕೃಷ್ಣ ಪರಮಹಂಸರ ಲೀಲಾನಾಟಕದ "ಸಾರದಾ" ಪಾತ್ರಧಾರಿಯಾದ ಜಗಜ್ಜನನಿಯ ಕೊನೆಯ ಅಂಕದ ಪರದೆ ಜಾರಲಿದೆ. ಲೋಕೋದ್ಧಾರಕ್ಕಾಗಿ ತಂತಾನಾಗಿಯೇ ಕಟ್ಟಿಕೊಂಡಿದ್ದ ಕಟ್ಟುಗಳನ್ನೆಲ್ಲ ಬಿಡಿಸಿಕೊಳ್ಳಲಾಗಿದೆ. ರಾಧುವಿನ ಬಗ್ಗೆ ಅವರು ಬೆಳೆಸಿಕೊಂಡಿದ್ದ ಮೋಹವನ್ನು ಕಳಚಿದ್ದಾಗಿದೆ. ಸ್ವಾಮಿ ಶಾರದಾನಂದ ಮೊದಲಾದವರ ಸಕಲ ಪ್ರಯತ್ನವನ್ನೂ ಮೀರಿ ರಾಧುವನ್ನು ದೃಷ್ಟಿದೂರ ಮಾಡಲಾಗಿದೆ. ಶ್ರೀಮಾತೆಯವರ ಲೀಲಾವಸಾನದ ರಂಗಸಜ್ಜಿಕೆ ಸಜ್ಜಾಗಿದೆ. ಲೀಲಾವಸಾನಕ್ಕೆ ಐದು ದಿನಗಳಿವೆ. ಆಗ ಅನ್ನಪೂರ್ಣೆಯ ತಾಯಿ ಎಂಬ ಭಕ್ತೆಯೋರ್ವಳು ಶ್ರೀಮಾತೆಯವರ ದರ್ಶನಕ್ಕಾಗಿ ಬಂದಳು. ಆದರೆ ಯಾರನ್ನೂ ಒಳಗೆ ಬಿಡುತ್ತಿರಲಿಲ್ಲವಾದ್ದರಿಂದ ಬಾಗಿಲಿನ ಹೊರಗೆ ನಿಂತಿದ್ದಳು. ಜನಮನದ ಅಭೀಪ್ಸೆಯ ಫಲವೆಂಬಂತೆ ಶ್ರೀಮಾತೆಯವರ ದೃಷ್ಟಿ ಆಕೆಯ ಮೇಲೆ ಬಿತ್ತು. ಕರುಣೆಯೇ ಕರಗಿದಂತೆ ಮಾತೆಯವರು ಅವಳನ್ನು ಹತ್ತಿರ ಬರುವಂತೆ ಸನ್ನೆ ಮಾಡಿದರು. ಆಕೆ ಪ್ರಣಾಮ ಮಾಡಿ ಗದ್ಗದಿತಳಾಗಿ ಇಡೀ ಮನುಕುಲದ ಪ್ರತಿನಿಧಿಯೋ ಎಂಬಂತೆ "ತಾಯೆ, ಮುಂದೆ ನಮ್ಮ ಗತಿಯೇನು?" ಎಂದಳು. ಪುಣ್ಯವೇ ಒಯ್ಯೊಯ್ಯನೊರೆವಂತೆ ಅಪಾರ ಪ್ರೀತಿಯಿಂದ ಶ್ರೀಮಾತೆಯವರೆಂದರು "ಭಯವೇಕೆ? ನೀನು ಶ್ರೀಠಾಕೂರರನ್ನು ನೋಡಿರುವೆ. ಮತ್ತೇಕೆ ಭಯ?" ಸ್ವಲ್ಪ ತಡೆದು ಮತ್ತೆ ನಿಧಾನವಾಗಿ ಮೃದುವಾಗಿ ನುಡಿದರು: **"ಆದರೆ ನಿನಗೊಂದು ಮಾತನ್ನು ಹೇಳುವೆ. ನಿನಗೆ ಶಾಂತಿ ಬೇಕೆಂದಾದಲ್ಲಿ ಇತರರಲ್ಲಿ ದೋಷವನ್ನು ಹುಡುಕಬೇಡ. ಬದಲಾಗಿ ನಿನ್ನಲ್ಲಿರುವ ದೋಷವನ್ನೇ ನೋಡು. ಈ ಜಗತ್ತಿನಲ್ಲಿ ಯಾರೂ ಪರರಲ್ಲಮ್ಮ. ಎಲ್ಲ ನಿನ್ನವರೇ."** ತಮ್ಮ ಬದುಕಿನುದ್ದಕ್ಕೂ ತಪಸ್ಸಿನಂತೆ ಆಚರಿಸಿದ್ದನ್ನೇ ಕೊನೆಯ ಮಾತಾಗಿ ಉದ್ಗರಿಸಿದರು!



ಹೌದು! ಶ್ರೀಮಾತೆಯವರ "ಕೊನೆಯ ಮಾತಿನ" ವ್ಯಾವಹಾರಿಕ ಸತ್ಯವೂ ಮಾರ್ಮಿಕವಾಗಿದೆ. ಬೇರೆಯವರಲ್ಲಿ ತಪ್ಪುಗಳನ್ನು ಅರಸುತ್ತಾ ಹೋದಂತೆ ನಮ್ಮ ಬಗೆ ಕದಡುತ್ತದೆ, ಮನದ ನೆಮ್ಮದಿ ಕೆಡುತ್ತದೆ, ಶಾಂತಿಭಂಗವಾಗುತ್ತದೆ, ಬೇರೆಯವರಿಂದ ಬೇರೆಯಾಗಬೇಕಾಗುತ್ತದೆ ಮತ್ತು ಪ್ರೀತಿ ವಾತ್ಸಲ್ಯಗಳಿಗೆ ಬದಲಾಗಿ ದ್ವೇಷಾಸೂಯೆಗಳು ತಲೆ ಎತ್ತುತ್ತವೆ. ಕೊನೆಗೆ ಎಲ್ಲರಿಂದಲೂ ಬೇರೆಯಾಗಿ ಏಕಾಂಗಿಯಾಗಬೇಕಾಗುತ್ತದೆ. ಬದುಕು ನೆಮ್ಮದಿಗೆ ಬದಲಾಗಿ ಅಶಾಂತಿಯ ಬೀಡಾಗುತ್ತದೆ.

ಆದರೆ ಈ ಮಾತಿನ ಅರ್ಥ ಇಷ್ಟಕ್ಕೆ ನಿಂತುಬಿಟ್ಟಿದ್ದರೆ ಇದಕ್ಕೆ ಮಹತ್ವವೇನೂ ಇರುತ್ತಿರಲಿಲ್ಲ. ಎಲ್ಲ ನುಡಿಗಳಲ್ಲೊಂದಾಗಿ ಕರಗಿ ಹೋಗಿಬಿಡುತ್ತಿತ್ತು. ಆದರೆ... ಆದರೆ... ಅದರಾಚೆಗೆ ಮತ್ತೇನನ್ನೊ ಧ್ವನಿಸುತ್ತದೆ. ಅಲ್ಲಿ ಇಣುಕಿ ನೋಡಿದರೆ, ನಿತ್ಯಸತ್ಯದ, ಸತ್ಯಸ್ಯಸತ್ಯದ ಹೊಳಹು ಹೊಳೆಯುತ್ತದೆ. ಬದುಕಿನ ಎಳೆಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ, ಮನುಷ್ಯ ಬೇರೆಯವರಲ್ಲಿರುವ ದೋಷಗಳನ್ನು ಬೆದಕಿ ನೋಡುವುದನ್ನೇ ತನ್ನ ಕಾಯಕವೆಂಬಂತೆ ಬಗೆದಿದ್ದಾನೆ. ನಾಲ್ಕು ಜನ ಸೇರಿರುವಲ್ಲಿ ನೋಡಿ; ಅಲ್ಲಿ ಬೇರೊಬ್ಬರ ದೋಷಗಳ ಗುಣಗಾನ ನಡೆಯುತ್ತದೆ—ತನ್ನನ್ನುಳಿದು. ಬೇರೆಯವರ ಅವಗುಣಗಳೇ ನಮ್ಮ ಕಣ್ಣಿಗೆ ಗೋಚರವಾಗುತ್ತವೆ. ಹಾಗೆ ನಾವು ಮಾತನಾಡುವಾಗ ತಾನು ಅವನಿಗಿಂತ ಮೇಲು ಎಂಬ "ಅಹಂ" ಗುಪ್ತವಾಗಿಯೋ, ಸುಪ್ತವಾಗಿಯೋ, ಅವ್ಯಕ್ತವಾಗಿಯೋ ನಮ್ಮೊಳಗೆ ನೆಲೆಗೊಂಡಿರುತ್ತದೆ. ಅಷ್ಟೇ ಅಲ್ಲ, ದೋಷವನ್ನು ಹುಡುಕುವ ಮನ ತನಗರಿವಿಲ್ಲದಂತೆ ದೋಷಗಳತ್ತಲೇ ಜಾರುತ್ತಿರುತ್ತದೆ.

ನೆಲೆ ಕುಸಿಯುತ್ತದೆ. ಮಣ್ಣಿನಲ್ಲಿ ಬೆರೆತ ಪದಾರ್ಥಗಳು ಮಣ್ಣಾಗಿ ಹೋಗುವಂತೆ ನಮ್ಮಲ್ಲಿ ಸಾಧನೆಗಳು ಮಣ್ಣುಗೂಡಿ ಹೋಗುತ್ತವೆ.

ಆದುದರಿಂದಲೆ ತಾಯಿ ಎಚ್ಚರಿಸುತ್ತಿದ್ದಾರೆ "ಬೇರೊಬ್ಬರಲ್ಲಿ ತಪ್ಪನ್ನು ಹುಡುಕಬೇಡ" ಎಂದು. ತಪ್ಪನ್ನು ಯಾರಲ್ಲಿ ಹುಡುಕುವುದು? ಸ್ವಾಮಿ ಅಶೋಕಾನಂದರು ಹೇಳುತ್ತಾರೆ: "ನೀವು ಇತರರಲ್ಲಿ ಏನೇ ದೋಷ ನೋಡಿದರೂ ಆ ದೋಷ ನಿಮ್ಮಲ್ಲಿ ಎಲ್ಲೋ ಇರುತ್ತದೆ." ಸ್ವಾಮಿ ಸೋಮನಾಥಾನಂದರು ಹೇಳುತ್ತಾರೆ: "ಕೆಟ್ಟದ್ದು ಕ್ರಮೇಣ ಒಳ್ಳೆಯದಾಗುವುದಕ್ಕೆ ಪ್ರಯಾಣ ಹೊರಟಿದ" (*ನಗೆಗಾರ ರಾಮಕೃಷ್ಣ*, ಪು.೩೮). ಹಾಗಿದ್ದರೆ ತಪ್ಪನ್ನು ಯಾರಲ್ಲಿ ಹುಡುಕುವುದು? ಅಣುರೇಣುತೃಣಕಾಷ್ಠದಲ್ಲೂ ಅವನೇ ಇದ್ದಾನೆ ಎಂಬ ವಿರಾಟ್‌ದರ್ಶನದ ಸತ್ಯದ ನಿಗೂಢತೆಯನ್ನು ಅರ್ಥಮಾಡಿಕೊಳ್ಳಲೆಳಸಿದರೆ ಯಾರಲ್ಲಿ ತಪ್ಪು ಹುಡುಕುವುದು?

ಶ್ರೀಮಾತೆಯವರು ಕೊನೆಕೊನೆಯಲ್ಲಿ ಎಲ್ಲರಲ್ಲೂ ಶ್ರೀರಾಮಕೃಷ್ಣರನ್ನೇ ಕಾಣತೊಡಗಿದರು. "ಹಿಂದೆ ಅವರು ನೈವೇದ್ಯದ ಮೇಲೆ ಯಾರಾದರೂ ಮಕ್ಕಳ ಆಸೆಯ ದೃಷ್ಟಿ ಬಿದ್ದರೆ ಅದನ್ನು ದೇವರಿಗೆ ಅರ್ಪಿಸುತ್ತಿರಲಿಲ್ಲ. ಆದರೆ ಈಗ ಒಂದು ದಿನ ಪೂಜೆಗೆ ಮುಂಚೆಯೇ ಹುಡುಗನೊಬ್ಬನಿಗೆ ತಿನ್ನಿಸಿದರು. ಸ್ವಾಮಿ ಪರಮೇಶ್ವರಾನಂದರು ಆಕ್ಷೇಪಿಸಿದಾಗ ಅವರೆಂದರು, 'ಅವನು ತಿನ್ನಲಿ ಬಿಡು. ಠಾಕೂರರು ಅವನಲ್ಲೂ ಇದ್ದಾರೆ.' ಒಂದು ರಾತ್ರಿ ಅವರ ಸೇವಕಿಗೆ ಮಲಗಲು ತಲೆದಿಂಬು ಇರಲಿಲ್ಲ. ಶ್ರೀಮಾತೆಯವರು ಕೂಡಲೆ ತಮ್ಮ ದಿಂಬನ್ನು ಕೊಟ್ಟರು. ಸ್ವಾಮಿ ಪರಮೇಶ್ವರಾನಂದರು ಇದನ್ನು ಗಮನಿಸಿ ಅದನ್ನು ಉಪಯೋಗಿಸಕೂಡದೆಂದು ಸೇವಕಿಗೆ ಹೇಳಿದರು. ಶ್ರೀಮಾತೆಯವರು ಹೇಳಿದರು: "ಅವಳು ಅದನ್ನು ಉಪಯೋಗಿಸಲಿ. ಶ್ರೀರಾಮಕೃಷ್ಣರು ನಿಮ್ಮೆಲ್ಲರಲ್ಲೂ ಇದ್ದಾರೆ." ಒಂದು ದಿನ ದೇವರ ನೈವೇದ್ಯಕ್ಕೆ ಇಟ್ಟಿದ್ದ ಹಾಲಿನ ಬಟ್ಟಲನ್ನು ಪರಮೇಶ್ವರಾನಂದರಿಗೆ ಕೊಟ್ಟು ಕುಡಿಯಲು ಹೇಳಿದರು. ಅವರಿಗೆ ಗಾಬರಿಯಾಗಿ "ಇದೇನು ತಾಯಿ? ನೀವಿನ್ನೂ ಹಾಲನ್ನು ದೇವರಿಗೆ ಅರ್ಪಿಸಿಲ್ಲ. ಅದಕ್ಕೆ ಮೊದಲೇ ಅದೇ ಬಟ್ಟಲಿನಲ್ಲಿ ಅದನ್ನು ಕುಡಿಯಲು ಹೇಳುತ್ತಿರುವಿರಲ್ಲ! ನನ್ನಿಂದಾಗದು" ಎಂದರು. "ಕುಡಿ ಮಗು, ನಿನ್ನಲ್ಲೆ ಆ ಠಾಕೂರರಿರುವರು" ಎಂದು ಶ್ರೀಮಾತೆಯವರು ಕಳಕಳಿಯಿಂದ ನುಡಿದರು." (*ಶ್ರೀಮಾತೆ ಶಾರದಾದೇವಿ*, ಸ್ವಾಮಿ ನಿತ್ಯಸ್ಥಾನಂದ, ಪು.೩೮೭). ಈಗ ಹೇಳಿ, ತಪ್ಪು ಯಾರಲ್ಲಿ ಹುಡುಕುವುದು? ಅದಕ್ಕೆ ಶ್ರೀಮಾತೆ ಹೇಳಿದರು: "ಈ ಜಗತ್ತಿನಲ್ಲಿ ಯಾರೂ ಪರರಲ್ಲಮ್ಮ ಎಲ್ಲ ನಿನ್ನವರೇ. ಆದುದರಿಂದ ಬೇರೆಯವರಲ್ಲಿ ದೋಷ ಎಣಿಸಬೇಡ. ಬದಲಾಗಿ ನಿನ್ನಲ್ಲಿರುವ ದೋಷವನ್ನೇ ನೋಡು."

ಶ್ರೀಮಾತೆಯವರ "ಕೊನೆಯ ಮಾತಿ"ನಲ್ಲಿ ಮತ್ತೊಂದು ಉದ್ಗಾರ ಹೊರಹೊಮ್ಮಿದೆ. "ಮಗು, ನಿನಗೆ ಶಾಂತಿ ಬೇಕಾದರೆ ... " ಶಾಂತಿ ಸಾಧಿಸಲು ದುಸ್ಸಾಧ್ಯವಾದ ಆದರ್ಶ! ಆದರೆ ಸಾಧಿಸಲೇಬೇಕಾದ ಆದರ್ಶ! ಶಾಂತಿ ಯಾರಿಗೆ ಬೇಡ? ಜಗತ್ತಿನ ಎಲ್ಲ ಜೀವಜಂತುಗಳೂ ಶಾಂತಿಗಾಗಿಯೇ ಹಂಬಲಿಸುತ್ತವೆ, ಹೋರಾಡುತ್ತವೆ. ಇಡೀ ಜಗತ್ತೇ ಶಾಂತಿಗಾಗಿ ಹಂಬಲಿಸುತ್ತದೆ. ಶಾಂತಿಯನ್ನು ಪಡೆಯುವುದೇ ಎಲ್ಲ ಚೇತನಗಳ ಪರಮ ಚರಮ ಗುರಿ. ಅದಕ್ಕಾಗಿಯೇ ಮಾನವನು ಜೀವನದುದ್ದಕ್ಕೂ ಹೋರಾಡುತ್ತಾನೆ. ಆದರೆ ಶಾಂತಿಯ ನೆಲೆಯನ್ನು ಅರಿಯಲಾರದಲೇ ಅಳಿಯುತ್ತಾನೆ. ಅಳಿದ ಮೇಲೆ ನಾವೆಲ್ಲ ನೆರೆದು "ಆತ್ಮಕ್ಕೆ ಶಾಂತಿ ಸಿಗಲೆಂದು" ಪ್ರಾರ್ಥಿಸುತ್ತೇವೆ. ಹೇಗಿದೆ ವಿಪರ್ಯಾಸ? ಜೀವನದುದ್ದಕ್ಕೂ ಪಡೆಯಲಾಗದ್ದನ್ನು ಅನಂತರವಾದರೂ ಪಡೆಯಲೆಂಬ ಹಾರೈಕೆ! ಆದುದರಿಂದಲೇ ಶ್ರೀಮಾತೆಯವರು ಹೇಳುತ್ತಾರೆ: "ನಿನಗೆ ಶಾಂತಿ ಬೇಕೆಂದಾದರೆ ನೀನು ಹೊರಗೆ ನೋಡಬೇಡ, ನಿನ್ನೊಳಗೆ ನೋಡು" ಎಂದು. ಒಳಗಿನ ಕಲ್ಮಶ ಕರಗಿದರೆ ಶಾಂತಿಗೆ ನೆಲೆ ದೊರೆಯುತ್ತದೆ. ಅದಲ್ಲದೆ ದೋಷವನ್ನರಸುವ ಮನಕ್ಕೆ ನೆಮ್ಮದಿಯೆಲ್ಲಿ? ಅಷ್ಟೇ ಅಲ್ಲ. ಇತರರ ದೋಷವನ್ನು ಪಟ್ಟಿಮಾಡುವ ಮನಕ್ಕೆ "ನಾನು"ವಿಗೆ ನೆಲೆ ಒದಗಿಸಿಕೊಟ್ಟಂತಾಗುತ್ತದೆ. ಶ್ರೀರಾಮಕೃಷ್ಣರು ಹೇಳುತ್ತಾರೆ: "ಸಾಸುವೆ ಕಾಳಿನಷ್ಟು 'ಅಹಂ' ಇದ್ದರೂ ಮುಕ್ತಿ ದೊರಕದು" ಎಂದು. ಆದುದರಿಂದಲೇ ಶ್ರೀಮಾತೆಯವರ— **ಕೊನೆಯ ಮಾತು, ಆದರೆ ಕೊನೆಯಿರದ ಮಾತು, ಮತ್ತದೇ ಕೊನೆಯ ಮಾತು.**

ಜಗಜ್ಜನನಿಯ ಈ ಮಾತುಗಳನ್ನು ನಾವು ಅರ್ಥ ಮಾಡಿಕೊಳ್ಳಲು ಸಾಧ್ಯವೆ? "ಶರಣಾಗುವುದೆ ಲೇಸು ಕಾದಿಗೆಲಲರಿಯದಿರೆ." ಆದುದರಿಂದ ನಮಗೆ ಶರಣಾಗತಿಯೇ ಗತಿ. ಆದರೆ "ಶರಣಾ"ಗುವಷ್ಟು ಸಬಲರೆ ನಾವು? ಅಮ್ಮನನ್ನೇ ಪ್ರಾರ್ಥಿಸೋಣ—ನಿನ್ನತುಳ ಕರುಣೆಯ ಹರಿಸಿ, ರಕ್ಷಿಸು ನಮ್ಮನು —ಎಂದು!

**ಶರಣಾಗತ ದೀನಾರ್ತ ಪರಿತ್ರಾಣ ಪರಾಯಣೇ ।**
**ಸರ್ವಸ್ಯಾರ್ತಿಹರೇ ದೇವೀ ನಾರಾಯಣಿ ನಮೋಽಸ್ತು ತೇ ॥**

ಪರ್ಷಿಯಾ ದೇಶದ ಮಹಾಕವಿ ಸಾದಿ ಬಾಲ್ಯದಿಂದಲೂ ಧರ್ಮಪರನಾಗಿದ್ದವನು. ಕಾಲಕಾಲಕ್ಕೆ ಸರಿಯಾಗಿ ಎದ್ದು ದೇವರಿಗೆ ಪ್ರಾರ್ಥನೆ ಸಲ್ಲಿಸುತ್ತಿದ್ದನು. ಒಂದು ರಾತ್ರಿ ಸಾದಿ ತನ್ನ ತಂದೆಯ ಎದುರಿಗೆ ಕುಳಿತು ಕುರಾನನ್ನು ಪಠಿಸುತ್ತಿದ್ದನು. ಅಲ್ಲಿ ಸುತ್ತ ಇದ್ದವರಲ್ಲಿ ಕೆಲವರು ತೂಕಡಿಸುತ್ತಿದ್ದರು, ಕೆಲವರು ನಿದ್ರೆ ಮಾಡುತ್ತಿದ್ದರು. ಹುಡುಗ ಸಾದಿಗೆ ಅವರನ್ನು ನೋಡಿ, ಅವರಿಗಿಂತ ತಾನು ಮೇಲು ಎಂದು ಗರ್ವ ಆಯಿತು. "ಅಪ್ಪಾಜಾನ್! ಕುರಾನ್ ಪಠನಕಾಲದಲ್ಲಿ ಇವರು ಯಾರೂ ಎಚ್ಚರವಾಗಿಲ್ಲವಲ್ಲ! ಎಲ್ಲರೂ ಸತ್ತಂತೆ ಮೈಮರೆತಿದ್ದಾರೆ!" ಎಂದ. ಸಾದಿಯ ತಂದೆ ಮಗನ ಮುಖವನ್ನು ವ್ಯಸನದಿಂದ ನೋಡಿ, "ಮಗೂ, ಇತರರ ದೋಷಗಳನ್ನು ಹೀಗೆ ಎತ್ತಿ ಆಡುವುದಕ್ಕಿಂತ ನೀನೂ ನಿದ್ರೆಹೋಗಿದ್ದಿದ್ದರೆ, ಎಷ್ಟು ಚೆನ್ನಾಗಿರುತ್ತಿತ್ತು!"ಎಂದ. ಸಾದಿ ಅಂದು ಒಂದು ದೊಡ್ಡ ಪಾಠವನ್ನು ಕಲಿತ.

— ಜಿ.ಪಿ.ರಾಜರತ್ನಂ ಅವರ ವಿಚಾರರಶ್ಮಿಯಿಂದ